**ದಿನಾಂಕ:24-08-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್ ವಿ ಎಂ ವಕೀಲರಿಂದ:**

ನಾನು ಮುಕ್ಕಲ ಗ್ರಾಮದಿಂದ ಬಂದಿರುತ್ತೇನೆ. 1 ನೇ ಪ್ರತಿವಾದಿ ನನ್ನ ಅಣ್ಣ. ನನ್ನ ಅಣ್ಣ 10 ನೇ ಪ್ರತಿವಾದಿಯ ಹೆಸರಿನಲ್ಲಿ ನೆಲ್ಲಬೀಡ ಗ್ರಾಮದ ರಿ ಸ ನಂಬರ 104/1 ಅ ರಲ್ಲಿ 3 ಎಕರೆ 2

ಗುಂಟೆ ಜುವೀನು ಇದೆ ಎಂದರೆ ಸರಿ. ಅದೇ ರೀತಿ ನರೇಗಲ್ಲ ಗ್ರಾಮದ ರಿ ಸ ನಂಬರ 352 ರಲ್ಲಿ 3 ಎಕರೆ 13 ಗುಂಟೆ ಜಮೀನು ಇದೆ ಎಂದರೆ ಸರಿ. ಅದೇ ರೀತಿ ಶಂಕ್ರಿಕೊಪ್ಪ ಗ್ರಾಮದ ರಿ ಸ ನಂಬರ 43 ರಲ್ಲಿ 31 ಗುಂಟೆ ಜಮೀನು ಇದೆ ಎಂದರೆ ಸರಿ. ಈ ಮೇಲೆ ಹೇಳಲಾದ ಜಮೀನುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಆ ಆಸ್ತಿಗಳನ್ನು ಈ ದಾವೆಗೆ ಸೇರ್ಪಡೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಕಾಕನ ಹೆಸರು ಶೇಕಪ್ಪ, ಅವರ ಹೆಂಡತಿಯ ಹೆಸರು ವೀರಮ್ಮ ಆಗಿರುತ್ತದೆ. ನನ್ನ ಕಾಕಾ ಶೇಕಪ್ಪ ಮತ್ತು ವೀರಮ್ಮರವರ ದಾಂಪತ್ಯ ಜೀವನದಿಂದ ಯಾವುದೆ ಮಕಕಳು ಜನಿಸದೆ ಮೃತಪಟ್ಟಿರುತ್ತಾರೆ. ನನ್ನ ಕಾಕಾ ಶೇಕಪ್ಪನವರು ದಿಃ 30-08-2020 ರಂದು ಶಂಕ್ರಿಕೊಪ್ಪ ಗ್ರಾಮದಲ್ಲಿ ಮೃತಪಟ್ಟರು. ನನ್ನ ಕಾಕಾ ಸಾಯುವ ಕಾಲದಲ್ಲಿ 3 ನೇ ಪ್ರತಿವಾದಿಯ ಜೊತೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಶೇಕಪ್ಪ ನವರು ಸಾಯುವ ಕಾಲಕ್ಕೆ ಶಿಗ್ಗಾಂವಿ ಯಲ್ಲಿದ್ದರು. ಶೇಕಪ್ಪನವರು ಶಂಕ್ರಿಕೊಪ್ಪ ಗ್ರಾಮದಲ್ಲಿದ್ದ, ಶಿಗ್ಗಾಂವಿಯಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ 10 ವರ್ಷಗಳ ಹಿಂದೆ ವೀರಮ್ಮ ನವರು ಮೃತಪಟ್ಟರು ಎಂದರೆ ಸರಿಯಲ್ಲ. ಸಾಕ್ಷಿಯ ಆರು ವರ್ಷಗಳ ಹಿಂದೆ ಮೃತಪಟ್ಟರು ಎಂದು ಸ್ವತಃ ನುಡಿಯುತ್ತಾರೆ. ಶೇಕಪ್ಪನವರ ವೀರಮ್ಮನವರು ಮೃತಪಟ್ಟ ನತರ ಸುಮಾರು 5-6 ವರ್ಷಗಳ ಕಾಲ ಶಂಕ್ರಿಕೊಪ್ಪ ಗ್ರಾಮದಲ್ಲ ವಾಸವಾಗಿದ್ದರು ಎಂದರೆ ಸರಿಯಲ್ಲ. ಕೇವಲ ಎರಡು ವರ್ಷಗಳ ಕಾಲ ವಾಸವಾಗಿದ್ದರು ಎಂದು ಸ್ವತಃ ನುಡಿಯುತ್ತಾರೆ. ನನ್ನ ಕಾಕಾ ಸಾಯುವ ಕಾಲಕ್ಕೆ ವಯೋಸಹಜ ಕಾಯಿಲೆಯಿಂದ ಮೃತಪಟ್ಟರು ಎಂದರೆ ಸರಿ. ನನ್ನ ಚಿಕ್ಕಪ್ಪ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ಅವರು ನಡೆದಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಕಾಕನ ಹೆಸರಿನಲ್ಲಿ ಶಂಕ್ರಿಕೊಪ್ಪ ಗ್ರಾಮದ ರಿ ಸ ನಂಬರ 352/5 ರಲ್ಲಿ 3 ಎಕರೆ 20 ಗುಂಟೆ ಜಮೀನು ಇತ್ತು. ಆತ ಜೀವಂತವಿರುವಾಗಲೇ 3 ನೇ ಪ್ರತಿವಾದಿಗೆ ಬಿಟ್ಟುಕೊಟ್ಟನು ಎಂದರೆ ಸರಿಯಲ್ಲ. ಈ ಬಗ್ಗೆ ಡ ನಂಬರ 43/2019-20 ದಿಃ15-02-2020 ರಂದು ಮಂಜುರಾಯಿತು ಎಂದರೆ ಸರಿಯಲ್ಲ. ದಾವಾ ಆಸ್ತಿ ರಿ ಸ ನಂಬರ 352/5 ಕ್ಕೆ ಸಂಬಂದಪಟ್ಟಂತೆ ಎಲ್ಲಾ ಮಾಹಿತಿ ಮತ್ತು ದಾಖಲೆಗಳನುನ ನಮ್ಮ ವಕೀಲರಿಗೆ ನೀಡಿರುತ್ತೇನೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಆ ಜಮೀನಿನ ಉತಾರೆ ನನ್ನ ಕಾಕನ ಹೆಸರಿನಲ್ಲಿತ್ತು. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಅನುಸೂಚಿ 1 ರ ಸ್ವತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಈ ಆಸ್ತಿಯು ಪ್ರಸ್ತುತವಾಗಿ ಅಮೃತ ಕೋಂ ಗದಿಗೆಪ್ಪ ಬೆನಕಣ್ಣನವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ಅಮೃತ ಬೆನಕಣ್ಣನವರ ರವರನ್ನು ಈ ದಾವೆಯನ್ನು ಪಕ್ಷಗಾರನಾಗಿ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ